PRAJAVANI 3

# ಸಿಪಿಸಿಆರ್‌ಐ: ಕೃಷಿ ಮೇಳ 10ಕ್ಕೆ

ವಿಟ್ಲ: ಇಲ್ಲಿನ ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯಲ್ಲಿ (ಸಿಪಿಸಿಆರ್‌ಐ) ಇದೇ 10ರಂದು ಕೃಷಿ ಮೇಳ ನಡೆಯಲಿದೆ ಎಂದು ನಿರ್ದೇಶಕ ಪಿ. ಚೌಡಪ್ಪ ಅವರು ಶುಕ್ರವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ತಂತ್ರಜ್ಞಾನಗಳ ಬಗ್ಗೆ ಕೃಷಿಕರಿಗೆ ಹೆಚ್ಚಿನ ಅರಿವು ಮೂಡಿಸಿ, ಕೃಷಿ ಉತ್ಪಾದನೆಯನ್ನು ಲಾಭದಾಯಕಗೊಳಿಸುವ ಸಲುವಾಗಿ ಈ ಕೃಷಿ ಮೇಳ ಹಮ್ಮಿಕೊಳ್ಳಲಾಗಿದೆ. ಮೇಳವನ್ನು ಕೇಂದ್ರದ ಕಾನೂನು ಸಚಿವ ಡಿ.ವಿ. ಸದಾನಂದ ಗೌಡ ಉದ್ಘಾಟಿಸಲಿದ್ದಾರೆ ಎಂದರು.

ಕೃಷಿ ಮೇಳದಲ್ಲಿ ವಿಜ್ಞಾನಿಗಳು ಮತ್ತು ಕೃಷಿಕರೊಂದಿಗೆ ಸಂವಾದ, ಅಡಿಕೆಯೊಂದಿಗೆ ಬಹುಬೆಳೆ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಕೃಷಿಯನ್ನು ಲಾಭದಾಯಕಗೊಳಿಸುವ ಕುರಿತು ವಿಚಾರ ಸಂಕಿರಣ, ಕೃಷಿಕರಿಗೆ, ಮಹಿಳಾ ಕೃಷಿಕರಿಗೆ, ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಹಾಗೂ ಕೃಷಿ ಚಟುವಟಿಕೆಗಳಿಗೆ ಪೂರಕವಾದ ಹೊಸ ತಂತ್ರಜ್ಞಾನ ಮತ್ತು ಸಂಶೋಧನೆಗಳ ಬಗ್ಗೆ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಂದ ವಸ್ತುಪ್ರದರ್ಶನ ಮಳಿಗೆಗಳು ಇರಲಿವೆ. ಕೃಷಿಕರು ತಮ್ಮ ತೋಟದಲ್ಲಿ ಬೆಳೆದ ಉತ್ಪನ್ನಗಳನ್ನೂ ಪ್ರದರ್ಶಿಸಲು ಅವಕಾಶ ವಿದ್ದು, ಉತ್ತಮ ಉತ್ಪತ್ತಿಗೆ ಮತ್ತು ವಸ್ತು ವಸ್ತುಪ್ರದರ್ಶನ ಮಳಿಗೆಗೆ ಪುರಸ್ಕಾರ ನೀಡಲಾಗುವುದು ಎಂದರು.

ದೇಶದಲ್ಲಿ 16,500 ಟನ್ ಕೊಕ್ಕೊ ಉತ್ಪಾದನೆಯಾಗುತ್ತಿದ್ದು 40 ಸಾವಿರ ಟನ್ ಆವಶ್ಯಕತೆಯಿದೆ. ಹೀಗಾಗಿ ಉತ್ಪಾದನೆ ಹೆಚ್ಚಿಸಬೇಕಾಗಿದೆ. ತೆಂಗಿನ ಕಲ್ಪರಸ ಉತ್ಪಾದನೆಯಿಂದ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು. ಅದನ್ನು ಸೇವಿಸುವುದರಿಂದ ಆರೋಗ್ಯಕ್ಕೆ ಅಡ್ಡ ಪರಿಣಾಮಗಳಿಲ್ಲ. ಅಮಲು ಪದಾರ್ಥ ಎಂಬ ತಿಳಿವಳಿಕೆ ತಪ್ಪು ಎಂದು ಅವರು ಹೇಳಿದರು.

ಗೋಷ್ಠಿಯಲ್ಲಿ ವಿಟ್ಲ ಸಿಪಿಸಿಆರ್‌ಐ ಮುಖ್ಯಸ್ಥ ಕೆ.ಎಸ್.ಆನಂದ್, ವಿಜ್ಞಾನಿಗಳಾದ ಕೆ.ಬಾಲಚಂದ್ರ ಹೆಬ್ಬಾರ್, ಕೆ.ಮುರಲೀಧರ್ ಇತರರು ಇದ್ದರು.